# ಆಹಾ ಸುದ್ದಿ!

★ ಸಸಿತೋಟ



ರಷ್ಯಾದ 77ರ ನಿಕೊಲಾಯ್ ಕೊರೆಯುವ ಚಳಿಯಲ್ಲೂ ಮಂಜಿನ ನೀರಿನಲ್ಲೇ ಸ್ನಾನ ಮಾಡೋದು, ಮಂಜುಗಡ್ಡೆಯಿಂದಲೇ ಮೈ ಉಜ್ಜಿಕೊಳ್ಳೋದು. ಕಳೆದ 50-60 ವರ್ಷಗಳಿಂದಲೂ ಇದೇ ಅಭ್ಯಾಸವಂತೆ ಮಿಲಿಟರಿಯಲ್ಲಿದ್ದು ನಿವೃತ್ತನಾಗಿರುವ ಈತನಿಗೆ. ಅಮೆರಿಕದ ಜೊತೆಗಿನ ರಷ್ಯಾದ ಶೀತಲ ಸಮರದಲ್ಲಿ ಈ ತಣ್ಣನೆಯ ಮನುಷ್ಯನ ಕೊಡುಗೆ ಬಹಳಷ್ಟಿರಬಹುದು ಎಂಬ ಸಂಶಯವಂತೂ ಮೂಡುತ್ತದೆ.

ಲಂಡನ್ ಬೀದಿ ಬದಿಯಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದಿರುವ ಕ್ರಿಸ್ಮಸ್ ಮರಗಳಿವು. ಹಬ್ಬ ಮುಗಿದ ಮೇಲೆ ಗಬ್ಬೆದ್ದು ಹೋಗುವ ಬೆಂಗಳೂರಿನ ಬೀದಿಯ ಗಾಳಿ ಅಲ್ಲಿಗೂ ಬೀಸುತ್ತಿರಬಹುದು.



ಡೆನ್ಮಾರ್ಕ್‌ನಲ್ಲಿ ದಂಪತಿ ವಿಚ್ಛೇದನಕ್ಕೆ ಅರ್ಜಿ ಹಾಕಿದ ಮೇಲೆ ಗಂಡ ಮತ್ತೊಂದು ಅರ್ಜಿ ಹಾಕಿದನಂತೆ, ಆಕೆಗೆ ಸಿಕ್ಕ 2.3 ದಶಲಕ್ಷ ಡಾಲರ್ ಲಾಟರಿ ಹಣದಲ್ಲಿ ತನಗೂ ಪಾಲು ಬೇಕೆಂದು. ಆದರೆ ವಿಚ್ಛೇದನ ಪ್ರಕ್ರಿಯೆ ನಡೆಯುತ್ತಿದ್ದು, ದಂಪತಿ ಪ್ರತ್ಯೇಕವಾಗಿ ವಾಸಿಸುತ್ತಿರುವಾಗ ಆ ಹಣ ಹೆಂಡತಿಗೇ ಸೇರಬೇಕು ಎಂದು ತೀರ್ಪು ನೀಡಿತಂತೆ ಕೋರ್ಟು. ಒಲ್ಲದ ಹೆಂಡತಿಯಿಂದ ಬೇರ್ಪಡುವುದೇ ಲಾಟರಿ ಹೊಡೆದಂತೆ ಎಂದು ಗಂಡ ಸುಮ್ಮನಿರಬಹುದಿತ್ತು.

ಮಧ್ಯಪ್ರದೇಶದ ಆಮ್ಖೋ ಗ್ರಾಮದಲ್ಲಿ ಮನೆಯೊಳಗಿದ್ದ ರಾಜ್ರಾಣಿ ಎಂಬಾಕೆಯ ಭುಜದ ಮೇಲೆ ಹಿಮ್ಮಗಡ್ಡೆಯಂತಾಗಿದ್ದ ಮಲ-ಮೂತ್ರದ ಉಂಡೆ ಬಿದ್ದು ಆಸ್ಪತ್ರೆ ಸೇರಬೇಕಾಯ್ತಂತೆ. ಅದು ವಿಮಾನದಿಂದ ಬಿದ್ದಿದ್ದು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರಂತೆ. ಭಾರತದ ಆಕಾಶದಿಂದ ಏನೆಲ್ಲಾ ಸುರಿಯುತ್ತಿದೆ, ಮಳೆಯೊಂದನ್ನು ಬಿಟ್ಟು.



ಇವರೆಲ್ಲ ಕ್ಯಾಲಿಫೋರ್ನಿಯದ ಕೈದಿಗಳು. ಜಿಮ್ನಾಶಿಯಂನಲ್ಲಿ ಝಂಡಾ ಹೂಡಿದ್ದಾರೆ. ಅಲ್ಲಿಯ ಅಧಿಕೃತ ಜೈಲಿನಲ್ಲಿ ಕೈದಿಗಳು ತುಂಬಿ ತುಳುಕುತ್ತಿದ್ದು, ಜಿಮ್ನಾಶಿಯಂ, ಮನರಂಜನಾ ಸ್ಥಳ ಮೊದಲಾದ ಕಡೆಗೆ ಸ್ಥಳಾಂತರಿಸಿದ್ದಾರಂತೆ. ಇಲ್ಲಿಯ ಕೈದಿಗಳಿಗೂ ಅಲ್ಲಿಯ ಕೈದಿಗಳಿಗೂ ಒಂದೇ ವ್ಯತ್ಯಾಸ, ಇಲ್ಲಿ ಜೈಲಿನೊಳಗೇ ಮನರಂಜನೆ ಸಿಕ್ಕರೆ, ಅಲ್ಲಿ ಮನರಂಜನಾ ಸ್ಥಳಕ್ಕೆ ಜೈಲೇ ತೆರಳುತ್ತದೆ.



ಸಾಹಸಿ ಬೈಸಿಕಲ್ ಸವಾರ ಡ್ಯಾನಿ ಸ್ಕಾಟ್‌ಲೆಂಡ್‌ನ ಅತ್ಯಂತ ದುರ್ಗಮ ಸ್ಥಳವಾದ ಕುಲ್ಲಿನ್ ರಿಜ್ ಮೇಲೆ ನಿಂತು ಕೇಕೆ ಹೊಡೆದ ದೃಶ್ಯವಿದು. ಮನುಷ್ಯ ಚತುಷ್ಪಾದಿಯಂತಾದರೂ ಏರಲು ಕಷ್ಟಪಡಬೇಕಾದ ಈ ಶಿಖರಕ್ಕೆ ತನ್ನ ಸವಾರಿ ಬೈಸಿಕಲ್ ಅನ್ನೂ ಎತ್ತಿಕೊಂಡು ಹೋದ ಡ್ಯಾನಿಗೆ ಸಂಸಾರವೆಂಬ ಬೈಸಿಕಲ್ ಸವಾರಿಯೇ ಇದಕ್ಕಿಂತ ಕಷ್ಟ ಇರಬಹುದು.